ಕಿಂಡರ್‌ಗಾರ್ಟನ್‌ಗೆ. ಯುಕೆಜಿಗೂ ಅಷ್ಟೇ... ಇದನ್ನು ನೀವು ಏನು ಮಾಡಿದ್ದೀರಿ? ಹಾಗಾದರೆ ಬೆಂಗಳೂರಿನಲ್ಲಿ ಬರೇ ಹತ್ತೇ ಶಾಲೆಗಳು ಇರುವುದು? ಯಾವ ಶಾಲೆಯು ಎಕ್ಸ್‌ಪ್‌ಶನ್ ಇದೆ ಎಂಬುದನ್ನು ತೋರಿಸಿ. ನ್ಯಾಶನಲ್ ಹೈಸ್ಕೂಲ್ ಎಂದು ಹೇಳಬಹುದು. ಅಲ್ಲಿ ಯಾವ ಡೊನೇಷನ್ ಇಲ್ಲ. ಈ ವಿಚಾರವನ್ನು ಮಾನ್ಯ ಮಂತ್ರಿಗಳು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ.

ಪ್ರೊ: ಬಿ.ಕೆ. ಚಂದ್ರಶೇಖರ್:– ಮಾನ್ಯ ಸುಬ್ಬಾರೆಡ್ಡಿಯವರು ಲೀಡಿಂಗ್ ಅಡ್ವೋಕೇಟ್. ಆ ಶಾಲೆಯವರನ್ನು ನೀವು ಜೈಲಿಗೆ ಕಳುಹಿಸುವುದಕ್ಕೆ ತಯಾರಿದ್ದೀರೇನ್ರಿ ಎಂದು ಬಹಳ ಜನರು ಹೇಳುತ್ತಾರೆ. ಏನು ಮಾಡುವುದು .....ರೂಲ್ ಆಫ್ ಲಾ..... ಇದೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:– ನಿಮ್ಮ ಕೈಯಲ್ಲಿ ನಿಯಂತ್ರಣ ಮಾಡಲು ಆಗುವುದಿಲ್ಲ ಎಂದು ಹೇಳಿ... ನಿಮ್ಮ ಪೋರ್ಟ್‌ಪೋಲಿಯೋ, ಬದಲಾವಣೆ ಆಗಲಿ, you are not able to control.....

ಶ್ರೀ ಡಿ.ಬಿ. ಚಂದ್ರೇಗೌಡ:– ಮಾನ್ಯ ಸುಬ್ಬಾರೆಡ್ಡಿಯವರು ಮಕ್ಕಳ ವಿಚಾರವನ್ನು ಮರೆತು ಹೋಗಿದ್ದಾರೆ. ಅವರು ಮಕ್ಕಳ ವಿಚಾರವನ್ನು ಬಿಟ್ಟು ಮೊಮ್ಮಕ್ಕಳ ವಿಚಾರವನ್ನು ಥಿಂಕ್ ಮಾಡಲಿ.

ಪ್ರೊ. ಬಿ.ಕೆ. ಚಂದ್ರಶೇಖರ್:– ನಾನು ಮತ್ತೊಮ್ಮೆ ಹೇಳುತ್ತೇನೆ. ಶಾಸಕರು, ಸ್ನೇಹಿತರುಗಳು ಇಂಥ ಕೆಲಸವನ್ನು ನಿರ್ದಿಷ್ಟವಾಗಿ ಮಾಡಬಹುದು, ಅಥವಾ ಇಂಥ ಶಾಸನವನ್ನು ಮಾಡಬಹುದು ಎಂದು ಹೇಳಲಿ, ಅದನ್ನು ಹೇಗೆ ಎನ್‌ಫೋರ್ಸ್ ಮಾಡಬಹುದು.... ಪ್ರಾಮಾಣಿಕವಾಗಿ ನಮಗೊಂದು ಕಾನ್‌ಶಿಯೆನ್ಸ್ ಇದ್ದರೆ, ಪ್ರಾಕ್ಟಿಕಲ್ ಆಗಿ ಅದನ್ನು ಹೇಗೆ ಎನ್‌ಫೋರ್ಸ್ ಮಾಡಬಹುದು ಎಂದು ಅವರು ಹೇಳಿದ್ದರೆ, ನಾವು ಮಾಡುವುದಕ್ಕೆ ತಯಾರಾಗಿದ್ದೇವೆ. ಸುಮ್ಮನೆ ಬೀದಿಯಲ್ಲಿ ಹೋಗುವವರನ್ನೆಲ್ಲಾ ನಾನು ಅಲ್ಲಿ ನಿಂತಿಕೊಂಡು ನಿಮ್ಮನ್ನು ಅರೆಸ್ಟ್ ಮಾಡುತ್ತೇವೆಂದು ಹೇಳುವುದೆಲ್ಲಾ ಸಾಧ್ಯವಿದೆಯೇ?

ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ

376(3285): ಶ್ರೀ ಕೃಷ್ಣಮೂರ್ತಿ ಎಂ. (ಕಡೂರು) ಮಾನ್ಯ ಗ್ರಾಮೀಣ ಮತು ನೀರು ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಗ್ರಾಮೀಣ ಜನತೆಗೆ ಕುಡಿಯುವ ನೀರಿನ ಸಂಬಂಧಿಸಿದಂತೆ ತಲಾ ಎಷ್ಟು ಲೀಟರ್ ನೀರು ಒದಗಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ;

ಆ) ಸರಬರಾಜಾಗುತ್ತಿರುವ ಕುಡಿಯುವ ನೀರಿನ ಗುಣಮಟ್ಟವು ತೀರಾ ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮಗಳೇನು; ವಿವರ ಒದಗಿಸುವುದು;

ಇ) ಎಷ್ಟು ಕಡೆಗಳಲ್ಲಿ ಗುಣಮಟ್ಟ ಪರೀಕ್ಷೆ ನಡೆಸಲಾಗಿದೆ;

ಈ) ಶುದ್ಧ ಕುಡಿಯುವ ನೀರಿನ ಪೂರೈಕೆಗೆ ಸರ್ಕಾರವು ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ?

ಶ್ರೀ ಕೆ.ಬಿ. ಕೋಳಿವಾಡ (ಗ್ರಾಮೀಣ ಮತ್ತು ನೀರು ಸರಬರಾಜು ಸಚಿವರು):

ಅ) ರಾಜ್ಯದ ಗ್ರಾಮೀಣ ಜನತೆಗೆ ದಿನಂಪ್ರತಿ ತಲಾ 55 ಲೀಟರ್ ಪ್ರಮಾಣದಲ್ಲಿ ಕುಡಿಯುವ ನೀರನ್ನು ಒದಗಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಆ) ರಾಜ್ಯದ ಒಟ್ಟು 56682 ಗ್ರಾಮೀಣ ಜನವಸತಿಗಳ ಪೈಕಿ 21008 ಜನವಸತಿಗಳಲ್ಲಿ ಕುಡಿಯುವ ನೀರಿನ ಗುಣಮಟ್ಟ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಈ ಸಮಸ್ಯೆ ಪರಿಹರಿಸಲು ದೂರದ ಕೊಳವೆ ಬಾವಿಗಳು : ಮೇಲ್ಮೈ ಮೂಲಗಳಿಂದ ಸುರಕ್ಷಿತ ಕುಡಿಯುವ ನೀರಿನ ಪೂರೈಕೆಗಾಗಿ ಯೋಜನೆಗಳನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

ಇ) ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿರುವ ಎಲ್ಲಾ ಕುಡಿಯುವ ನೀರಿನ ಮೂಲಗಳ ಗುಣಮಟ್ಟ ಪರೀಕ್ಷೆಯನ್ನು 2000–01ನೇ ಸಾಲಿನಲ್ಲಿ ಮಾಡಿಸಲಾಗಿದೆ.

ಈ) ಕುಡಿಯುವ ನೀರಿನಲ್ಲಿ ಗುಣಮಟ್ಟ ಸಮಸ್ಯೆ (ಅಂದರೆ ಅಧಿಕ ಫ್ಲೋರೈಡ್, ಅಧಿಕ ಲವಣಾಂಶ ಇತ್ಯಾದಿ ರಾಸಾಯನಿಕ ದೋಷಗಳು) ಇರುವಂತಹ ಗ್ರಾಮಗಳಿಗೆ ಸುರಕ್ಷಿತ ಕುಡಿಯುವ ನೀರಿನ ಪೂರೈಕೆಗಾಗಿ ಸಬ್‌ಮಿಷನ್ ಎಂಬುವ ಒಂದು ಪ್ರತ್ಯೇಕ ಕಾರ್ಯಕ್ರಮದಡಿ ಯೋಜನೆಗಳನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಡೀಫ್ಲೋರಿಡೇಷನ್ ಸ್ಥಾವರಗಳು : ಗೃಹೋಪಯೋಗಿ ಫಿಲ್ಟರ್‌ಗಳನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಅಲ್ಲದೆ, ಅಂದಾಜು ಮೊತ್ತ ಕಡಿಮೆ ಇರುವಂತಹ ಯೋಜನೆಗಳನ್ನು ಸಾಮಾನ್ಯ ಕಾರ್ಯಕ್ರಮದಡಿಯೂ ಅನುಷ್ಠಾನ ಗೊಳಿಸಲಾಗುತ್ತಿದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:– ಮಾನ್ಯ ಸಭಾಧ್ಯಕ್ಷರೇ, ರಾಜ್ಯದ ಗ್ರಾಮೀಣ ಜನತೆಗೆ ಕುಡಿಯುವ ನೀರಿಗೆ ಸಂಬಂಧಿಸಿದಂತೆ ತಲಾ ಎಷ್ಟು ಲೀಟರ್ ಕುಡಿಯುವ ನೀರನ್ನು ಒದಗಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ ಎಂಬ ಪ್ರಶ್ನೆಗೆ ರಾಜ್ಯದ ಗ್ರಾಮೀಣ ಜನತೆಗೆ ದಿನಂಪ್ರತಿ ತಲಾ 55 ಲೀಟರ್ ಪ್ರಮಾಣದಲ್ಲಿ ಕುಡಿಯುವ ನೀರನ್ನು ಒದಗಿಸಲಾಗುವುದು ಎಂದು ಹೇಳಿದ್ದಾರೆ. ಇದನ್ನು ಅಧಿಕಾರಿಗಳು ಬೂಸ್ಟ್ ಮಾಡಿ ಇವರಿಗೆ ಕಳುಹಿಸಿರುತ್ತಾರೆ, ಇವರು ಉತ್ತರ ಹೇಳುತ್ತಾರೆ. ಬರೇ ನನ್ನ ಚಿಕ್ಕಮಗಳೂರು ಜಿಲ್ಲೆಯಲ್ಲಲ್ಲ. ಇಡೀ ರಾಜ್ಯದಲ್ಲಿಯೇ ಯಾವುದೇ ಯೋಜನೆ ಇರಬಹುದು. ಅದು ರಾಷ್ಟ್ರೀಯ ಗ್ರಾಮಾಂತರ ಕುಡಿಯುವ ನೀರಿನ ಯೋಜನೆ ಇರಬಹುದು, ಕಿರಿನೀರು ಸರಬರಾಜು ಇರಬಹುದು. ಯಾವಾಗ ಪ್ರಾರಂಭ ಮಾಡಿರುತ್ತಾರೆ, ಯಾವಾಗ ಈಲ್ಡ್‌ನ್ನು ಗೊತ್ತು ಮಾಡುತ್ತಾರೆ, ಆ ಒಂದು ಅಂಕಿಅಂಶವನ್ನು ಇಟ್ಟುಕೊಂಡು ಹೇಳಿದ್ದಾರೆಯೇ ಹೊರತು, ಈಚೆಗೆ ಯಾವ ಒಂದು ಮಾನದಂಡದಿಂದ ಅದನ್ನು ಸರ್ವೆ ಮಾಡಿದ್ದಾರೆಯೇ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಸರ್ಕಾರದ ಯೋಜನೆಯೇನು ಎಂದು ಕೇಳಿದಾಗ, ಸರ್ಕಾರದ ಪಾಲಿಸಿ ಒಬ್ಬನಿಗೆ ಒಂದು ದಿವಸಕ್ಕೆ 55 ಲೀಟರ್ ಕೊಡಬೇಕೆಂಬ ಯೋಜನೆ ಇದೆ. ಒಟ್ಟು 56682 ಜನವಸತಿಗಳಲ್ಲಿ 36 ಸಾವಿರಕ್ಕಿಂತಲೂ ಮೇಲ್ಪಟ್ಟು 55 ಲೀಟರ್ ಕೊಡುವ ವ್ಯವಸ್ಥೆ ಕರ್ನಾಟಕ ರಾಜ್ಯದಲ್ಲಿದೆ. ತಾವು ಮುಂದೆ defect ಎಂಬ ಬಗ್ಗೆ ಕೇಳಿದ್ದೀರಿ. ಈ 56682 ಜನವಸತಿಗಳಲ್ಲಿ 21008 ಜನವಸತಿಗಳಲ್ಲಿ ಗುಣಮಟ್ಟ ಕಡಿಮೆ ಇರುವುದನ್ನು ಈಗಾಗಲೇ ಕಂಡುಹಿಡಿದಿದ್ದೇವೆ. ಇನ್ನುಳಿದ ಬೇರೆ ಬೇರೆ ಕಡೆ 20 ಲೀಟರ್‌ಗೆ ಕಡಿಮೆಯಾಗದಷ್ಟು ನೀರನ್ನು ನಾವು ರಾಜ್ಯದ ಎಲ್ಲಾ ಜನವಸತಿಗಳಲ್ಲಿ ವ್ಯವಸ್ಥೆ ಮಾಡುತ್ತಿದ್ದೇವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:– ಅಧ್ಯಕ್ಷರೇ, ದೇವರ ಸಾಕ್ಷಿಯಾಗಿ ಹೇಳುತ್ತೇನೆ, ಸಚಿವರು ಸತ್ಯಕ್ಕೆ ದೂರವಾದ ಮಾತು ಹೇಳುತ್ತಿದ್ದಾರೆ. 55 ಲೀಟರನ್ನು ಯಾವುದೇ ಗ್ರಾಮ ಪಂಚಾಯಿತಿಯ ಗ್ರಾಮದಲ್ಲಿ ಕೊಡಲಾಗುತ್ತಿದೆ ಎಂಬುದು ಸತ್ಯಕ್ಕೆ ದೂರವಾದ ವಿಚಾರ.

ಶ್ರೀ ಡಿ.ಬಿ. ಚಂದ್ರೇಗೌಡ:– ಸ್ಪೆಸಿಫಿಕ್ ಆಗಿ ಇಂತಹ ಕಡೆ ತೊಂದರೆ ಇದೆ ಎಂದು ಹೇಳಿದರೆ ಆ ಕಡೆ ಗಮನಹರಿಸಬಹುದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ:– ಸ್ಪೆಸಿಫಿಕ್ಕಾಗೇ, ಚಂದ್ರೇಗೌಡರೇ: ನೀವು ಈ ತರಹ ಇಂಟರ್‌ಫಿಯರ್ ನಾವು ಏನು ಮಾಡುವುದು ಹೇಳಿ? ನಮಗೆ ಸರಿಯಾದ ಉತ್ತರ ಕೊಡದಿದ್ದರೆ ನಾವು ಒಪ್ಪಿಕೊಳ್ಳಲು ಆಗುವುದೇ?

ಅಧ್ಯಕ್ಷರು:– ಕೃಷ್ಣಮೂರ್ತಿಗಳೇ ಬೇಗ ಮುಗಿಸಿ, ಟೈಮಿಲ್ಲ, ಇನ್ನೂ 9 ಪ್ರಶ್ನೆಗಳಿವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:– 56682 ಜನವಸತಿಗಳಲ್ಲಿ 21008 ಜನವಸತಿಗಳಲ್ಲಿ ಫ್ಲೋರೈಡ್ಸ್ ಮತ್ತು ಕಳಪೆ ಗುಣಮಟ್ಟ ಇದೆ, ಅದನ್ನು ಹಂತಹಂತವಾಗಿ ತೆಗೆದುಕೊಳ್ಳುವುದಾಗಿ ಹೇಳುತ್ತಿದ್ದಾರೆ. ಇದು 1996–97ರಲ್ಲೇ ಸರ್ವೆ ಮಾಡಿ ಯಾವ್ಯಾವ ಭಾಗದಲ್ಲಿ fluoride ಇದೆ calcium ಇದೆ ಎಂದು ಸರ್ಕಾರ ಗುರ್ತು ಮಾಡಿದೆ. ಹೀಗೆ ಆರೇಳು ವರ್ಷ ಕಳೆದರೂ ಕೂಡ ನಾವು ರಾಜ್ಯದಲ್ಲಿ ಈಗಾಗಲೇ ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ, ಕೆಲವೊಂದು ಗ್ರಾಮಗಳಲ್ಲಿ ಆ ಫ್ಲೋರೈಡ್ ಯುಕ್ತ ನೀರು ಕುಡಿದು ಮೂಳೆಗಳು ಮೃದುವಾಗಿ ಅಂಗವಿಕಲರಾಗಿರುವುದನ್ನು ಓದಿದ್ದೇವೆ. ಆದರೆ ಇನ್ನೂ ಹಂತಹಂತವಾಗಿ ತೆಗೆದುಕೊಳ್ಳುತ್ತೇವೆಂಬ ಉತ್ತರ ಹೇಳುತ್ತಿದ್ದಾರೆ, ಏನಾಗಿದೆ ಒಂದು ಎಂದರೆ ರಾಜೀವಗಾಂಧಿ ವಾಟರ್ ಮೆಷನ್‌ನಲ್ಲಿ ಕೇಂದ್ರ ಸರ್ಕಾರ.

ಅಧ್ಯಕ್ಷರು:– ಭಾಷಣ ಬೇಡ, ಪ್ರಶ್ನೆ ಕೇಳಿ,

ಶ್ರೀ ಕೆ.ಬಿ. ಕೋಳಿವಾಡ:– ಕುಡಿಯುವ ನೀರಿನ ಗುಣಮಟ್ಟ ಕಡಿಮೆ ಇರುವುದು 21008 ಜನವಸತಿಗಳಲ್ಲಿ ಎಂದು ಹೇಳಿದ್ದೇನೆ. ಅದರಲ್ಲಿ fluoride ಹೆಚ್ಚು dangerous ಏನಿದೆ ಅದು 5838 ಜನವಸತಿಗಳಲ್ಲಿ fluoride ಅಂಶ permissible limit ಗಿಂತ ಹೆಚ್ಚಿದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:– ಮಾನ್ಯ ಅಧ್ಯಕ್ಷರೇ, De-fluoride ಏನೋ ಕೊಡುತ್ತೇವೆ purification ಗೆ ಎಂದು ಹೇಳಿದ್ದರು.

ಅಧ್ಯಕ್ಷರು:– ಕೊಡುತ್ತಾರೆ, Legislators ಎಲ್ಲರಿಗೂ ಪತ್ರ ಬರೆದಿದ್ದಾರೆ.

ಶ್ರೀ ಕೆ.ಬಿ. ಕೋಳಿವಾಡ:– 5838 ಜನವಸತಿಗಳಲ್ಲಿ fluoride ಅಂಶ permissible limit ಗಿಂತ ಹೆಚ್ಚಿದೆ ಎಂದು ಸರ್ಕಾರ ಕಂಡುಹಿಡಿದಿದೆ. ಅದರಲ್ಲಿ 1418 ಜನವಸತಿಗಳಲ್ಲಿ Rajiv Gandhi Sub-Mission Scheme ನೊಳಗೆ 96 ಸ್ಕೀಮ್‌ಗಳನ್ನು ನಾವು ರೂಪಿಸಿ ಅದರಲ್ಲಿ 47 ಸ್ಕೀಮ್‌ಗಳನ್ನು ಈಗಾಗಲೇ ಹಂತ ಹಂತವಾಗಿ ಮುಗಿಯುತ್ತಾ ಬಂದಿವೆ ಉಳಿದ ಜನ ವಸತಿಗಳನ್ನು ಈಗಾಗಲೇ ನಾನು ಪ್ರತಿ ಶಾಸಕರಿಗೂ ಪತ್ರ ಬರೆದು ತಿಳಿಸಿದ್ದೇನೆ. 100 River sofe masses, Hydro defluoridation plant ಗಳನ್ನು ಹಾಕಿದ್ದೇವೆ. ಅದರ ಜೊತೆಗೆ absorption technology ಯಡಿ 100 ಪ್ಲಾಂಟ್ ಎಲ್ಲೆಲ್ಲಿ ಹಾಕಿದ್ದೇವೆ ಎಂಬ ಪಟ್ಟಿ ಪ್ರತಿಯೊಬ್ಬ ಶಾಸಕರಿಗೂ ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು:– ಆ ಪಟ್ಟಿಯನ್ನು ಸದಸ್ಯರಿಗೆ ಕಳುಹಿಸಿಕೊಡಿ.

ಶ್ರೀ ಕೆ.ಬಿ. ಕೋಳಿವಾಡ್:– ನಾನು ಮುಗಿಸಿಬಿಡುತ್ತೇನೆ. River soft masses de-fluoridation plant ಗಳನ್ನು ಕೋಲಾರ 18, ತುಮಕೂರು 25, ದಾವಣಗೆರೆ 5, ಹಾಸನ 2,

ಬೆಳಗಾಂ 16, ಬಿಜಾಪುರ 21, ಗದಗ 4, ಗುಲ್ಬರ್ಗಾ 9, 100 River soft masses Technology ಇರತಕ್ಕಂಥ de-fluoridation plant ಗಳನ್ನು ಹಾಕಿದ್ದೇವೆ. ಇನ್ನೂ absorption Technologyಯ ನೂರು plant ಗಳನ್ನು ಕೋಲಾರ 25, ತುಮಕೂರು 30, ಚಿತ್ರದುರ್ಗ 10, ಗದಗ 25, ಹಾವೇರಿ 10 absorption Technology plant ಗಳನ್ನು ಹಾಕಿದ್ದೇವೆ–ಇವಲ್ಲದೆ.

ಅಧ್ಯಕ್ಷರು:– ಆಯಿತು ಬಿಡಿಯಪ್ಪ ಲೆಕ್ಕಾಚಾರ ಬೇಡವೇ? ಇನ್ನೂ 9 ಪ್ರಶ್ನೆಗಳಿವೆ, 9 ನಿಮಿಷ ಇದೆ, How can I manage, come on tell me. You must understand my difficulty also.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):– ಸಚಿವರೇ

ಶ್ರೀ ಕೆ.ಎಂ. ಕೃಷ್ಣಮೂರ್ತಿ:– ಶೆಟ್ಟರಿಗೆ ಅವಕಾಶ ಕೊಟ್ಟರೆ ಹೇಗೆ?

Mr. Speaker:- No, No, you cannot ask that question. He is the leader of the opposition. Please do not ask like that. ಅವರಿಗೆ permit ಮಾಡುವುದು my duty. I am very sorry.

ಶ್ರೀ ಜಗದೀಶ ಶೆಟ್ಟರ್:– ಅಯಿತು ನೀವೇ ಮಾತನಾಡೀಯಪ್ಪ.

Mr. Speaker:- Please do not accuse anybody on the Floor of the House. ನಿಮಗೇನಾದರೂ ತೊಂದರೆ ಇದ್ದರೆ ನನ್ನ ಚೇಂಬರಿಗೆ ಬನ್ನಿ, but do not accuse on the Floor of the House. ಶೆಟ್ಟರ್‌ರವರೇ, ನೀವು ಕೇಳಿ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಕೋಳಿವಾಡ್‌ರವರು 55 ಲೀಟರ್ ನೀರು ಒದಗಿಸುತ್ತಿರುವುದಾಗಿ ಹೇಳಿದರು. ಅವರು ಎದೆತಟ್ಟಿ ಹೇಳಲಿ, ಯಾವುದಾದರೂ ಒಂದು ಗ್ರಾಮದಲ್ಲಿ ಪ್ರತಿ ಮನುಷ್ಯನಿಗೆ 55 ಲೀಟರ್ ಕೊಡುತ್ತಿರುವುದು ಅನುಷ್ಠಾನವಾಗಿದ್ದರೆ ದಯವಿಟ್ಟು ಎದೆ ತಟ್ಟಿ ಹೇಳಿ. ನೀವು ಹೇಳಿದಂತೆ ನಾನು ಕೇಳುತ್ತೇನೆ. ಏಕೆಂದರೆ ಮುಖ್ಯಮಂತ್ರಿಗಳು ಬಜೆಟ್ ಭಾಷಣದಲ್ಲಿ ಹೇಳಿದ್ದರು, 55 ಲೀಟರ್ ಕೊಡುತ್ತೇವೆ ಎಂದು ಎಲ್ಲೂ ಕೊಡುತ್ತಾ ಇಲ್ಲ. 15 ಪರ್ಸೆಂಟ್ ಮೇಲೆ ಇವತ್ತು ಗ್ರಾಮೀಣ ಭಾಗಕ್ಕೆ ಗುಣಮಟ್ಟದ ನೀರು ಇಲ್ಲ. ಎಲ್ಲಾ ಗ್ರಾಮದಲ್ಲೂ ಇವತ್ತು ನೀರಿನ ಕೊರತೆ ಇದೆ. ಆಮೇಲೆ ವಿದ್ಯುಚ್ಛಕ್ತಿ ಅಭಾವ ಇದೆ. ಎರಡು ಮೂರು ತಾಸು ವಿದ್ಯುತ್ ಇರುವುದರಿಂದ ಪಂಪ್‌ಸೆಟ್ ಮೂಲಕ ನೀರು ಹೋಗುತ್ತಾ ಇಲ್ಲ. ಕುಡಿಯುವ ನೀರಿನ ಯೋಜನೆಗಳೆಲ್ಲ collapse ಆಗಿವೆ. ಅದಕ್ಕೆ ಇವತ್ತು ಪರಿಹಾರ ಹುಡುಕುವ ಕೆಲಸ ಮಾಡಿ.

ಅಧ್ಯಕ್ಷರು:– ಇನ್ನೂ 9 ನಿಮಿಷ ಇದೆ 9 question ಇದೆ, ನೀವು ಅರ್ಥಮಾಡಿಕೊಳ್ಳಬೇಕು ನಮ್ಮ difficulty. I know this is an important subject. How can I manage?

ಶ್ರೀ ಕೆ.ಬಿ. ಕೋಳಿವಾಡ:– ಕರ್ನಾಟಕ ರಾಜ್ಯದಲ್ಲಿ 56862 ಜನವಸತಿಗಳಲ್ಲಿ 36000 ಜನವಸತಿಗಳಲ್ಲಿ ನಾವು 55 ಲೀಟರ್‌ಗಿಂತ ಹೆಚ್ಚು ನೀರನ್ನು ಕೊಡಲು ಇವತ್ತಿಗೂ ಸೋರ್ಸಿದೆ. ತಾವು ಹೇಳಿದಂತೆ electricity or maintenance defects ಇದ್ದರೆ ತೊಂದರೆಯಾಗಿರಬಹುದು ಹೊರತುಯಾವ್ಯಾವ ಜನವಸತಿಗಳಿಗೆ 55 ಲೀಟರ್‌ಗಿಂತ ಹೆಚ್ಚು ನೀರನ್ನು ಒದಗಿಸಲಾಗುತ್ತಿದೆ ಎಂಬುದನ್ನು ಬರವಣಿಗೆಯಲ್ಲಿ ನಾನು ಕೊಡುತ್ತೇನೆ. ಮತ್ತು ನೂರಕ್ಕೆ 50ರಷ್ಟು fluoride ಇಲ್ಲ, ನಾನು ಅಂಕಿಸಂಖ್ಯೆಗಳನ್ನು ಕೊಟ್ಟಿದ್ದೇನೆ. ಎಲ್ಲೆಲ್ಲಿ fluoride ಇದೆ ಅದಕ್ಕೆ ಏನೇನು action ತೆಗೆದುಕೊಂಡಿದ್ದೇವೆ ಎಂದು detail ಆಗಿ ನಾನು ಹೇಳಿದ್ದೇನೆ.

ಅಧ್ಯಕ್ಷರು:– ಆಯಿತು, do not repeat.

ಶ್ರೀ ಕೆ.ಬಿ. ಕೋಳಿವಾಡ:– ಪ್ರತಿಯೊಬ್ಬ ಶಾಸಕರಿಗೂ ವಿವರ ಕಳುಹಿಸಿದ್ದೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ:– ಇವತ್ತಿನ ಪ್ರಶ್ನೆ ಬಗ್ಗೆ ನಾನು ಕೇಳುತ್ತಿರುವುದು. ಆಮೇಲೆ ಶುದ್ಧ ಕುಡಿಯುವ ನೀರಿನ ಪೂರೈಕೆಗೆ ಸರ್ಕಾರ ಯಾವ ಯೋಜನೆ ಹಮ್ಮಿಕೊಂಡಿದೆ ಅಂದರೆ ಯಾವ ಯೋಜನೆಗಳನ್ನೂ ಅವರು ನಿರ್ದಿಷ್ಟವಾಗಿ ಹೇಳಿಲ್ಲ. ಇವತ್ತು fluoride ನೀರು ಕುಡಿಯುವುದರಿಂದ ಏನಾಗಿದೆ ಅಂದರೆ ಮನುಷ್ಯನ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಕೇಂದ್ರ ಮತ್ತು ರಾಜ್ಯಸರ್ಕಾರಗಳು ಏನು ಕ್ರಮ ಕೈಗೊಂಡಿವೆ ಎಂಬುದನ್ನು ಹೇಳಿಲ್ಲ.

ಶ್ರೀ ಕೆ.ಬಿ. ಕೋಳೀವಾಡ:– ಶುದ್ಧ ಕುಡಿಯುವ ನೀರು ಕೊಡುವುದಕ್ಕೆಂದು Rajiv Gandhi Sub-Mission Scheme ಎಂದು special ಆಗಿ ಈ defected water ಮಾಡುವ ಸಲುವಾಗಿಯೇ ಇದೆ.

ಇದರಲ್ಲಿ 99 ಸ್ಕೀಮ್‌ಗಳನ್ನು ನಾವು ಈಗಾಗಲೇ ತಯಾರು ಮಾಡಿದ್ದೇವೆ, ಅದರಲ್ಲಿ ನಾವು 47 ಸ್ಕೀಮ್‌ಗಳನ್ನು ಈಗಾಗಲೇ ಮಂಜೂರಾತಿ ಕೊಟ್ಟು ಕೆಲಸ ಪ್ರಾರಂಭವಾಗಿದೆ, ನಡೆದಿದೆ. 9 ಸ್ಕೀಮ್‌ಗಳು ಕಂಪ್ಲೀಟ್ ಆಗಿವೆ. ಇನ್ನು 36 ಸ್ಕೀಮ್‌ಗಳು ವಿವಿಧ ಹಂತದಲ್ಲಿವೆ. ಇಷ್ಟೆಲ್ಲಾ ಮಾಡುವುದಕ್ಕೆ ನಮಗೆ ಖರ್ಚಾಗಿರುವುದು 61 ಕೋಟಿ 98 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಎಲ್ಲಾ ಗ್ರಾಮಗಳಿಗೂ ಹಂತ ಹಂತವಾಗಿ ಆರ್ಥಿಕ ಲಭ್ಯತೆಗನುಗುಣವಾಗಿ ನಾವು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ.

ಹಾವೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳು

377(3392): ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ (ಹಾವೇರಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾವೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಖಾಲಿ ಇರುವ ಎ.ಎನ್.ಎಂ. ಮತ್ತು ಸ್ಟಾಫ್ ನರ್ಸ್ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಈ ಖಾಲಿ ಹುದ್ದೆಗಳಿಂದ ಆಸ್ಪತ್ರೆಯ ಕೆಲಸಗಳಿಗೆ ತೊಂದರೆಯಾಗಿರುವುದಿಲ್ಲವೇ;

ಇ) ಸದರಿ ಖಾಲಿ ಹುದ್ದೆಗಳನ್ನು ಸರ್ಕಾರವು ಯಾವಾಗ ಭರ್ತಿ ಮಾಡುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹಾವೇರಿ ಜಿಲ್ಲಾ ಆಸ್ಪತ್ರೆಯಲ್ಲಿ 1 ಎ.ಎನ್.ಎಂ. ಮತ್ತು 3 ಸ್ಟಾಫ್ ನರ್ಸ್ ಹುದ್ದೆಗಳು ಖಾಲಿ ಇರುತ್ತವೆ.

ಆ) ಆಸ್ಪತ್ರೆಯ ದೈನಂದಿನ ಕಾರ್ಯಗಳಿಗೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗದಂತೆ ದೈನಂದಿನ ಕರ್ತವ್ಯ ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) ಖಾಲಿ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಸಮಿತಿಯ ಮುಖಾಂತರ ನೇಮಕ ಮಾಡುವ ಕಾರ್ಯ ಪ್ರಕ್ರಿಯೆಯಲ್ಲಿರುತ್ತದೆ.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸರಿಯಾದ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಮ್ಮ ಹಾವೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಸುಮಾರು 10 ರಿಂದ 15 ವರ್ಷ ಅಲ್ಲೇ ಕೆಲಸ ಮಾಡುತ್ತಿರುವ ಎಎನ್‌ಎಂಗಳು ಮತ್ತು ಸ್ಟಾಫ್ ನರ್ಸ್‌ಗಳಿದ್ದಾರೆ.